ಎಲ್ಲಾಕಡೆಗಳಲ್ಲೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಕಳಪೆ ಕಾಮಗಾರಿಯಾಗಲು ಅವಕಾಶವೇ ಇಲ್ಲ. ಒಂದು ವೇಳೆ ಕಾಮಗಾರಿಯಲ್ಲಿ ಹೆಚ್ಚು -ಕಡಿಮೆಯಾಗಿದ್ದರೆ ಅವರು ತಮ್ಮ ಅಧಿಕಾರಿಗಳಿಗೆ ಹೇಳುತ್ತಾರೆ, ತಕ್ಷಣ ಬಂದು ನೋಡುತ್ತಾರೆ.

ಶ್ರೀ ಶಿವಾನಂದ ನಾಯ್ಕ: ಇದರ ಬಗ್ಗೆ ತಕ್ಷಣವೇ ಎನ್‌ಕ್ವೆಯರಿ ಮಾಡಲಿ.

ಅಧ್ಯಕ್ಷರು: ಅದರ ಬಗ್ಗೆ ಎನ್‌ಕ್ವೆಯರಿ ಮಾಡಿಸಿ.

ಡಾ: ಹೆಚ್.ಸಿ. ಮಹದೇವಪ್ಪ: ನಾನು ಈಗಾಗಲೇ ಹೇಳಿರುವಂತೆ ಅದು ಕಳಪೆ ಕಾಮಗಾರಿಯಾಗುವುದಕ್ಕೆ ಸಾಧ್ಯವಿಲ್ಲ.

ಓ) ವಿಟ್ಲ ಕ್ಷೇತ್ರದ ಬಂಟ್ವಾಳ ತಾಲ್ಲೂಕಿನ ಬಿ.ಸಿ. ರಸ್ತೆಯಲ್ಲಿ ಸಂಚಾರಿ ಪೋಲೀಸ್ ಘಟಕ ಸ್ಥಾಪನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೆ, ಬಿ.ಸಿ. ರಸ್ತೆ ನನ್ನ ಕ್ಷೇತ್ರದ ಮತ್ತು ಬಂಟ್ವಾಳ ತಾಲ್ಲೂಕಿನ ಒಂದು ಪ್ರಮುಖ ಪೇಟೆಯಾಗಿದ್ದು, ಅಲ್ಲಿ ನಮ್ಮ ತಾಲ್ಲೂಕಿನ ಸರ್ಕಾರದ ಎಲ್ಲಾ ಪ್ರಮುಖ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿವೆಯಲ್ಲದೆ ಶಾಲಾ-ಕಾಲೇಜುಗಳೂ ಸಹ ಇದ್ದು ರಾಷ್ಟ್ರೀಯ ಹೆದ್ದಾರಿ ಪೇಟೆಯ ಮಧ್ಯ ಭಾಗದಿಂದ ಹಾಯ್ದು ಹೋಗುತ್ತದೆ. ನಮ್ಮ ಜಿಲ್ಲೆಯ ಎಲ್ಲಾ ಪ್ರಮುಖ ಕೇಂದ್ರಗಳಿಗೂ ಸಂಪರ್ಕವಿರುವ ಒಂದು ಊರು ಅದಾಗಿದ್ದು, ಅಂತಹ ಊರಿನಲ್ಲಿ ಈಗ ಜನಸಂಖ್ಯೆಯ ಹೆ ಚ್ಚಳ ಮತ್ತು ವಾಹನ ಸಂಚಾರ ಜಾಸ್ತಿಯಾಗಿರುವ ಕಾರಣ ಆ ರಸ್ತೆಯಲ್ಲಿ ಜನರಿಗೆ ಸಂಚರಿಸುವುದಕ್ಕೆ ಅಸಾಧ್ಯವಾಗುತ್ತಿದೆ ಮತ್ತು ರಸ್ತೆಯನ್ನು ದಾಟುವುದಕ್ಕಾಗದ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಆದುದರಿಂದ, ಅಲ್ಲೊಂದು ಸಂಚಾರಿ ಪೋಲೀಸ್ ಘಟಕವನ್ನು ಸ್ಥಾಪಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇದರ ಬಗ್ಗೆ ಪರಿಶೀಲಿಸುತ್ತೇವೆಂಬ ಉತ್ತರ ನನಗೆ ಬೇಡ, ಅದನ್ನು ಕಾರ್ಯಗತಗೊಳಿಸುತ್ತೇವೆಂಬ ಉತ್ತರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಹೇಳಿರುವುದು ನಿಜ, ಇಲ್ಲವೆಂದು ಹೇಳುವುದಿಲ್ಲ. ಅಲ್ಲಿನ ನೇತ್ರಾವತಿ ಸೇತುವೆಯನ್ನು ದಾಟಿ ಬಿ.ಸಿ. ರಸ್ತೆಗೆ ತಲುಪಲು ಬಹಳ ಕಷ್ಟವಾಗಿದೆ. ಅಲ್ಲದೆ, ಅಲ್ಲಿ ಎನ್.ಹೆಚ್.48 ಕೂಡ ಹಾಯ್ದು ಹೋಗುವುದರಿಂದ ಅವರು ಅಲ್ಲೊಂದು ಸಂಚಾರಿ ಪೊಲೀಸ್ ಘಟಕ ಕೇಳಿರುವುದು ಸಹಜವಾಗಿರುವುರಿಂದ ಇದನ್ನು ನಾನು ಗೃಹ ಸಚಿವರ ಗಮನಕ್ಕೆ ತರುತ್ತೇನೆ. ಅವರ

ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ.

(ಜ) ರಾಜ್ಯದ ಕಾಲೇಜುಗಳಲ್ಲಿ ಖಾಲಿಯಿರುವ ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವುದು.

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ರಾಜ್ಯದ ಕಾಲೇಜುಗಳಲ್ಲಿ ಸುಮಾರು 750 ಅಧ್ಯಾಪಕರ ಹುದ್ದೆಗಳು ಖಾಲಿಯಿದ್ದು, ಭರ್ತಿ ಮಾಡಲು ಇಲ್ಲಿಯವರೆಗೆ ಪ್ರಾಮುಖ್ಯತೆ ಕೊಟ್ಟಿರುವುದಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಕೆಪಿಎಸ್‌ಸಿ ಪರೀಕ್ಷೆಯಲ್ಲೂ ಅವಕಾಶ ಕೊಟ್ಟಿಲ್ಲ. ಆದುದರಿಂದ, ಸರ್ಕಾರದಲ್ಲಿ ಈ ಮೂಲಕ ಕೇಳಿಕೊಳ್ಳುವುದೇನೆಂದರೆ, ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಈ ಸಲವಾದರೂ ಅವಕಾಶ ಕೊಟ್ಟು ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ತಾವು ಕ್ರಮ ಕೈಗೊಳ್ಳುತ್ತೀರಾ? ಇದಕ್ಕೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದ ಕಾಲೇಜುಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ರಾಜ್ಯ ಸರ್ಕಾರವು ಕೆಪಿಎಸ್‌ಸಿಯನ್ನು ಕೇಳಬೇಕಾಗುತ್ತದೆ. ಖಾಲಿ ಇರುವ ಹುದ್ದೆಗಳು ಪ್ರಾಥಮಿಕ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರಬಹುದು, ಕಾಲೇಜುಗಳಿಗೆ ಸಂಬಂಧಿಸಿರಬಹುದು ಅಥವಾ ಜ್ಯೂನಿಯರ್ ಕಾಲೇಜ್ ಮತ್ತು ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಸಂಬಂಧಿಸಿದಂತಿರಬಹುದು. ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ನಾವು ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ.

(ಞ) ಪ್ರಾಥಮಿಕ ಶಾಲಾ ಶಿಕ್ಷಕರ ಸತ್ಯಾಗ್ರಹ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಶಾಲಾ ಶಿಕ್ಷಕರು ಬೇಡಿಕೆಗಳು ಈಡೇರುವವರೆಗೆ ಶಾಲೆಗಳ ಬಾಗಿಲು ತೆಗೆಯುವುದಿಲ್ಲವೆಂದು ಹೇಳಿದ್ದಾರೆ. ಇದರಿಂದ ಮಕ್ಕಳಿಗೆ ತುಂಬಲಾರದ ನಷ್ಟವಾಗುತ್ತಿದೆ, ಮಕ್ಕಳ ಮನಸ್ಸಿನ ಮೇಲೆ ತುಂಬ ಕೆಟ್ಟ ಪರಿಣಾಮವಾಗುತ್ತಿದೆ. ಸರ್ಕಾರ ಈ ಮುಷ್ಕರವನ್ನು ನಿಲ್ಲಿಸುವ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿದೆಯೆ? ಆಲೋಚನೆ ಮಾಡುತ್ತಿಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ, ಸರ್ಕಾರ ಶಿಕ್ಷಕರ ನ್ಯಾಯಯುತವಾದ ಬೇಡಿಕೆಗಳೇನಿದೆ ಅದರ ಬಗ್ಗೆ ಗಮನ ಹರಿಸಲಿ. ಬೇಗ ಶಾಲೆಗಳ ಬಾಗಿಲು ತೆರೆದು ಪಾಠಪ್ರವಚನಗಳು ಪ್ರಾರಂಭವಾಗಲಿ.